# <u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.</u>

## ಸಿ. ಸಿ. ನಂಃ **281.2019**

ಪಿ.ಡಬ್ಲ್ಯೂ- **1**
ಸಿ.ಡಬ್ಲ್ಯೂ- **1**

| | | |
|---|---|---|
| ಹೆಸರು | ಃ- | ಬಸಪ್ಪ ಸೂರಿನ |
| ತಂದೆ / ಗಂಡನ ಹೆಸರು | ಃ- | ದೇವಪ್ಪ |
| ವಯಾ | ಃ- | 43 ವರ್ಷ |
| ಉದ್ಯೋಗ | ಃ- | ವ್ಯವಸಾಯ |
| ವಾಸಸ್ಥಳ | ಃ- | ತಿರಲಾಪುರ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 01-10-2024 |

***<u>ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ</u>***

ಚಾಸಾ-4 ಮತ್ತು ಚಾಸಾ-7 ರವರು ನನ್ನ ಕಾಕಾನಾಗಬೇಕು. ಚಾಸಾ-5 ನನ್ನ ತಂದೆಯಾಗಬೇಕು. ಚಾಸಾ-6 ನನ್ನ ತಮ್ಮನಾಗಬೇಕು. ಆರೋಪಿತಳ ಪರಿಚಯ ನನಗೆ ಇದೆ.

2018 ರಲ್ಲಿ ತಾರೀಖು ಸುಮಾರು 9, 11 ಇರಬಹುದು. ನಾನು ನನ್ನ ಮನೆಗೆ ಡಿಜೈಲ್ ತೆಗೆದುಕೊಂಡು ಬಂದು ರಾತ್ರಿ ಸುಮಾರು 09-30 ಗಂಟೆಗೆ ಅದನ್ನು ನನ್ನ ವಾಹನಕ್ಕೆ ತುಂಬಿಸಿ ಊಟ ಮಾಡಲು ಮನೆಗೆ ಹೋದಾಗ ಆರೋಪಿತಳು, ಬಸಪ್ಪ ಸೂರಿನ್, ಯಲ್ಲಪ್ಪ ಬಸಪ್ಪ ಸೂರಿನ, ಈರಪ್ಪ ಬಸಪ್ಪ ಸೂರಿನ ಬಂದು ನನ್ನ ಕುತ್ತಿಗೆಯ ಕಾಲರಗೆ ಹಿಡಿದು, 1 ನೇ ಆರೋಪಿತನು ರಾಡನಿಂದ ನನ್ನ ತಲೆಗೆ ಹೊಡೆದಿರುತ್ತಾನೆ. 2 ನೇ ಆರೋಪಿತನು ಬಡಿಗೆಯಿಂದ ನನ್ನ ಬಲಬುಜಕ್ಕೆ ಹೊಡೆದಿರುತ್ತಾನೆ. ನಂತರ ನಾನು ಆಯಾ ತಪ್ಪಿ ಬಿದ್ದಿರುತ್ತೇನೆ.

ನಂತರ ನನಗೆ ಕೆ.ಎಂ.ಸಿ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುತ್ತದೆ.

ನಾನು ನವಲಗುಂದ ಠಾಣೆಯಲ್ಲಿ ಪ್ರಥಮ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಈಗ ಪ್ರಥಮ ಮಾಹಿತಿಯನ್ನು ನೋಡುತ್ತಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

*(*ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ**,** ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ**,** ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು*.)*

ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -

ದಿನಾಂಕ 04-11-2018 ರಂದು ರಾತ್ರಿ 10-45 ಗಂಟೆಗೆ ನಾನು ಡಿಜೈಲ್ ತೆಗೆದುಕೊಂಡು ಮನೆಗೆ ಹೋಗಿ ಹಿತ್ತಲದಲ್ಲಿ ಕೈಕಾಲು ಮುಖ ತೊಳೆಯುತ್ತಿದ್ದಾಗ ಎಲ್ಲಾ ಆರೋಪಿತರೂ ಗುಂಪಿ ಕಟ್ಟಿಕೊಂಡು ಬಂದು ನನಗೆ ಬೋಸಡಿಮಗನ ಬಹಳ ಆಗ್ಯೆತಿ, ಊರಿಗೆ ಬುದ್ದಿ ಮಾತು ಹೇಳಳಿಕೆ ಬರುತ್ತಾನೆ ಇವಾ ಇವನಿಗೆ ಬಿಡಾಕ ಹೋಗಬೇಡಾ ಅಂತಾ ಅವಾಚ್ಯ ಶಬ್ಬದಿಂದ ಬೈದು, 1 ನೇ ಆರೋಪಿತನು ತನ್ನ ಕೈಯಲ್ಲಿ ಇದ್ದ ಕಬ್ಬಿಣದ ರಾಡನಿಂದ ನನ್ನ ತಲೆಗೆ ಹೊಡೆದಿರುತ್ತಾನೆ ಎಂದರೆ ಸರಿ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಇದ್ದ ಒಂದು ಕಬ್ಬಿಣದ ರಾಡ ತೋರಿಸಿ, ಸಾಕ್ಷಿಯು 1 ನೇ ಆರೋಪಿಯು ನನಗೆ ಇದೇ ರಾಡನಿಂದ ಹೊಡೆದಿದ್ದು ಎಂದು ನುಡಿದಿರುತ್ತಾನೆ. ಕಾರಣ ಸದರಿ ಕಬ್ಬಿಣದ ರಾಡನ್ನು ಮು.ಮಾಲು 01 ಎಂದು ಗುರುತಿಸಲಾಯಿತು.

2 ನೇ ಆರೋಪಿತನು ನನಗೆ ಕಟ್ಟಿಗೆ ಬಡಿಗೆಯಿಂದ ಬಲಬುಜಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಇದ್ದ ಒಂದು ಕಟ್ಟಿಗೆ ಬಡಿಗೆಯನ್ನು ತೋರಿಸಿ, ಸಾಕ್ಷಿಯು 2 ನೇ ಆರೋಪಿಯು ನನಗೆ ಇದೇ ಬಡಿಗೆಯಿಂದ ಹೊಡೆದಿದ್ದು ಎಂದು ನುಡಿದಿರುತ್ತಾನೆ. ಕಾರಣ ಸದರಿ ಬಡಿಗೆಯನ್ನು ಮು.ಮಾಲು 02 ಎಂದು ಗುರುತಿಸಲಾಯಿತು.

4 ನೇ ಆರೋಪಿತಳು ನನ್ನ ಬಟ್ಟೆಯನ್ನು ಹಿಡಿದು ಎಳೆದಾಡಿದಳು ಎಂದರೆ ಸರಿ. ಚಾಸಾ-4 ರಿಂದ ಚಾಸಾ-6 ರವರಿಗೆ ಅವಾಚ್ಯ ಶಬ್ದದಿಂದ ಬೈದು ನಿಂದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಮು.ಮಾಲುಗಳನ್ನು ದಿನಾಂಕ 09-11-2018 ರಂದು ಪಂಚನಾಮೆಯ ಮೂಲಕ ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಆರೋಪಿತರು ಎಲ್ಲರೂ ಸೇರಿ ನನಗೆ ಜೀವ ಸಮೇತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಪಂಚನಾಮೆಯನ್ನು ದಿನಾಂಕ 11-11-2018 ರಂದು ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯ ಕಾಲಕ್ಕೆ ಒಂದು ಛಾಯಾಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಅದು ನಮ್ಮ ಮನೆಯ ಬಾವಚಿತ್ರ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರವನ್ನು ನಿ.ಪಿ.2 ಎಂದು ಗುರುತಿಸಲಾಯಿತು.

ಆರೋಪಿತರು ನನಗೆ ಹೊಡೆದ ಕಾರಣದಿಂದ ನನಗೆ ನನ್ನ ದಿನನಿತ್ಯದ ಕೆಲಸ ಮಾಡಲು ತೊಂದರೆಯಾಗುತ್ತಿದೆ ಮತ್ತು ಬಿಸಲಿಗೆ ಹೊದರೆ ತಲೆ ಸುತ್ತು ಬರುತ್ತದೆ ಎಂದು ನುಡಿಯುತ್ತಾರೆ.

ಕಾರಣ ಆರೋಪಿತರಿಗೆ ಶಿಕ್ಷೆ ನೀಡಬೇಕೆಂದು ವಿನಂತಿ.

*ಪಾಟೀಸವಾಲು ಆರೋಪಿ ಪರ ಶ್ರೀ ಪಿ ಹೆಚ್ ಕೆ ವಕೀಲರಿಂದ ಃ-*

ನಾನು ತಳವಾರ ಓಣಿಯ ನಿವಾಸಿ ಎಂದರೆ ಸರಿ. ನನ್ನ ಮನೆಯ ಮುಖ್ಯ ದ್ವಾರವು ಉತ್ತರ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಮನೆಯ ಮುಖ್ಯ ದ್ವಾರದ ಲಗತ್ತು 1 ನೇ ಹಿಸ್ಸಾ ಉತ್ತರ ದಿಕ್ಕಿನಲ್ಲಿ ದೇವಪ್ಪ ಗುರುಪಾದಪ್ಪ ಸೂರಿನ ರವರ ಹಿಸ್ಸಾ ಇರುತ್ತದೆ. ಅದಕ್ಕೆ ಲಗತ್ತು ನನ್ನ ಹಿಸ್ಸಾ ಇದೆ. ನನ್ನ ಮನೆಯ 2 ನೇ ಹಿಸ್ಸಾ ನನ್ನ ತಮ್ಮನಿಗೆ ಬರುತ್ತದೆ ಎಂದರೆ ಸರಿ. ಅದರ ನಂತರದಲ್ಲಿ 1 ನೇ ಆರೋಪಿತನ ಹಿಸ್ಸಾ ಬರುತ್ತದೆ ಅಂದರೆ ಸರಿಯಲ್ಲ. ಶಿವಪ್ಪನ ಹಿಸ್ಸಾ ಬರುತ್ತದೆ ಎಂದು ನುಡಿಯುತ್ತಾರೆ.

1 ನೇ ಆರೋಪಿತನ ಮನೆಯು ಪೂರ್ವಕ್ಕೆ ಬಾಗಿಲು ಲಗತ್ತು ಇರುತ್ತದೆ. 1 ನೇ ಆರೋಪಿತನ ಮನೆಯ ಪಶ್ಚಿಮಕ್ಕೆ ನನ್ನ ತಂದೆಯ ಹಿಸ್ಸಾ ಇರುತ್ತದೆ ಎಂದರೆ ಸರಿ. ನಮ್ಮ ಮನೆಗೆ ಮತ್ತು ಆರೋಪಿತರ ಮನೆಗೆ ಪ್ರವೇಶ ಮತ್ತು ಹೊರದ್ವಾರ ಮಾತ್ರ ಇರುತ್ತದೆ ಎಂದರೆ ಸರಿ. ನಮ್ಮ ಮನೆಯನ್ನು ನಾವು ಮುಖ್ಯ ದ್ವಾರದ ಮೂಲಕ ಉಪಬೋಗ ಮಾಡುತ್ತೇವೆ ಎಂದರೆ ಸರಿ. ಆರೋಪಿತರು ಹಿತ್ತಲು ಭಾಗದ ಮುಖಾಂತರ ಉಪಬೋಗ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮುಖ್ಯ ದ್ವಾರ ಮತ್ತು ಹಿತ್ಸಲು ದ್ವಾರ ನಾವೇ ಉಪಬೋಗ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ.

ನಿಪಿ-1 ದೂರಿನಲ್ಲಿ ನನಗೆ ವೈಯಕ್ತಿಕ ಮಾಹಿತಿ ಇಲ್ಲಾ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ್ವತಃ ನಾನೇ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಅದನ್ನು ಬರೆಯಲು ನನಗೆ ಯಾರು ಮಾಹಿತಿ ನೀಡಿಲ್ಲ.

ನಿಪಿ-1 ರಲ್ಲಿ ಯಲ್ಲಪ್ಪನು ರಾತ್ರಿ ವೇಳೆ ಕುಡಿದು ಬಂದು ತಂಟೆ ತಕರಾರು ಮಾಡುತ್ತಿದ್ದ ಆತನನ್ನು ಕರೆದು ನಾನು ಬುದ್ದಿ ಮಾತನ್ನು ಹೇಳಿರುತ್ತೇನೆ ಎಂದು ನಮೂದು ಮಾಡಿರುತ್ತೇನೆ ಆದರೆ ಅದು ಯಾವ ದಿನಾಂಕ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ದಿನಾಂಕವನ್ನು ನಾನು ನಿಪಿ-1 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

ನನ್ನ ಹೆಸರಿನಲ್ಲಿ ಯಾವುದೇ ವಾಹನವು ಇರುವುದಿಲ್ಲ. 1, 2 ಹಾಗೂ 4 ನೇ ಆರೋಪಿತರು ಖಾಯಂ ಮಂಗಳೂರಿನಲ್ಲಿ ದುಡಿಯುತ್ತಾರೆ ಎಂದರೆ ಸರಿ. 4 ನೇ ಆರೋಪಿತಳು ಒಡ್ಡರ ಓಣಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. 1, 2 ಹಾಗೂ 4 ನೇ ಆರೋಪಿತರ ಮನೆ ತುಂಬಾ ಚಿಕ್ಕದು ಇದೆ ಎಂದರೆ ಸರಿ.

ಮುದ್ದೆ ಮಾಲು 1 ಕಬ್ಬಿಣದ ರಾಡ ಸಾಮಾನ್ಯವಾಗಿ ಎಲ್ಲಾಕಡೆ ಸಿಗುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಇದ್ದ ಮುದ್ದೆ ಮಾಲುಗಳನ್ನು ತೋರಿಸಿ ಘಟನಾ ದಿನದಂದು ಕತ್ತಲು ಇದ್ದ ಕಾರಣ ನನಗೆ ಯಾವ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಅಂದರೆ ಸರಿಯಲ್ಲ.

ಆರೋಪಿತರು ಎಲ್ಲರೂ ಸೇರಿ ನನಗೆ ಬೈದಿದ್ದು, ನಿಂದಿಸಿದ್ದು ರಾಡನಿಂದ ಮತ್ತು ಬಡಿಗೆಯಿಂದ ಹೊಡೆದದ್ದು ಎಲ್ಲಾ ಸುಳ್ಳು ಅಂದರೆ ಸರಿಯಲ್ಲ.

ಚಾಸಾ-4 ರಿಂದ ಚಾಸಾ-7 ರವರು ನನ್ನ ಖಾಸಾ ಸಂಬಂದಿಕರು ಎಂದರೆ ಸರಿ. ಆರೋಪಿತರಿಗೆ ಮನೆಯಿಂದ ಹೊರಹಾಕಲು ಮತ್ತು ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಮತ್ತು ಚಾಸಾ-4 ರಿಂದ ಚಾಸಾ-7 ರವರು ಸೇರಿಕೊಂಡು ಆರೋಪಿತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ನನ್ನ ವಾಹನಕ್ಕೆ ಡಿಜೈಲ್ ತರುವ ಸಮಯದಲ್ಲಿ ಕತ್ತಲಿನಲ್ಲಿ ಬಿದ್ದು ಪೆಟ್ಟು ಮಾಡಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಸ್ವತಃ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ ಅಂದರೆ ಸರಿಯಲ್ಲ.

ಆರೋಪಿತರಿಗೂ ಮತ್ತು ಘಟನೆಗೂ ಯಾವುದೇ ಸಂಬಂದ ಇಲ್ಲಾ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**